**All India Radio: Bangalore**
**National Bulletins In Kannada**
**17.07.2025 / 1935 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

**<><*<><>*><>**

ಮುಖ್ಯಾಂಶಗಳು

೧. ಸ್ವಚ್ಛತಾ ಸರ್ವೇಕ್ಷಣ್ - ಸತತ ೮ ವರ್ಷಗಳಿಂದ ಅತ್ಯಂತ ಸ್ವಚ್ಛ ನಗರ ಬಿರುದು ಉಳಿಸಿಕೊಂಡ ಇಂದೋರ್

೨. ನಿಮಿಷ ಪ್ರಿಯಾ ಪ್ರಕರಣ ; ಕೇಂದ್ರ ಸರ್ಕಾರದಿಂದ ಎಲ್ಲಾ ರೀತಿಯ ಸಹಾಯ, ವಿದೇಶಾಂಗ ಸಚಿವಾಲಯ ಸ್ಪಷ್ಟನೆ

೩. ಮುಂದಿನ ೧೦೦ ವರ್ಷ ಸಹಕಾರಿ ಸಂಸ್ಥೆಗಳದ್ದು ನಿರ್ಣಾಯಕ ಪಾತ್ರ - ಅಮಿತ್ ಶಾ

೪. ಚೆಸ್‌ನಲ್ಲಿ ವಿಶ್ವದ ನಂಬರ್ ಒನ್ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸೋಲಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ್

**<><*<><>*><>**

ಇಂದೋರ್ ಸತತ ಎಂಟನೇ ವರ್ಷವೂ ಭಾರತದ ಅತ್ಯಂತ ಸ್ವಚ್ಛ ನಗರ ಎಂಬ ಬಿರುದನ್ನು ಉಳಿಸಿಕೊಂಡಿದೆ. ಕೇಂದ್ರ ಸರ್ಕಾರದ ವಾರ್ಷಿಕ ಸ್ವಚ್ಛತಾ ಸಮೀಕ್ಷೆಯಲ್ಲಿ ಸೂರತ್ ಎರಡನೇ ಸ್ಥಾನವನ್ನು ಪಡೆದುಕೊಂಡರೆ, ನವಿ ಮುಂಬೈ ಮೂರನೇ ಸ್ಥಾನದಲ್ಲಿದೆ. ನವದೆಹಲಿಯಲ್ಲಿ ಇಂದು ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಚ್ಛತಾ ಸರ್ವೇಕ್ಷಣ್ ೨೦೨೪-೨೫ ಪ್ರಶಸ್ತಿಗಳ ಒಂಬತ್ತನೇ ಆವೃತ್ತಿಯನ್ನು ಪ್ರದಾನ ಮಾಡಿದರು.

೩ ರಿಂದ ೧೦ ಲಕ್ಷ ಜನಸಂಖ್ಯೆ ಹೊಂದಿರುವ ನಗರಗಳ ವಿಭಾಗದಲ್ಲಿ, ನೋಯ್ಡಾ ಅತ್ಯಂತ ಸ್ವಚ್ಛ ನಗರವಾಗಿ ಹೊರಹೊಮ್ಮಿದರೆ, ನಂತರದ ಸ್ಥಾನ ಚಂಡೀಗಢ ಮತ್ತು ಮೈಸೂರು

ಪಾಲಾಯಿತು. ೧೦ ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳ ವಿಭಾಗದಲ್ಲಿ ಅಹಮದಾಬಾದ್ ಮೊದಲ ಸ್ಥಾನವನ್ನು ಪಡೆದುಕೊಂಡಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಷ್ಟ್ರಪತಿಗಳು, ವಿಕಸಿತ್ ಭಾರತ್ ೨೦೪೭ ರ ದೃಷ್ಟಿಕೋನದ ಪ್ರಮುಖ ಅಂಶಗಳಲ್ಲಿ ಸ್ವಚ್ಛತೆ ಕೂಡಾ ಒಂದು. ದೇಶವನ್ನು ಅಭಿವೃದ್ಧಿ ಹೊಂದಿದ, ಸ್ವಚ್ಛ, ಆರೋಗ್ಯಕರವನ್ನಾಗಿ ಮಾಡುವಂತೆ ದೇಶವಾಸಿಗಳನ್ನು ಒತ್ತಾಯಿಸಿದರು.

೧೭-೦೭-೨೦೨೫   ರಾಷ್ಟ್ರೀಯ ವಾರ್ತೆಗಳು ೧೯.೩೫   ಸ್ವಚ್ಛ ಸರ್ವೇಕ್ಷಣ್-೨

ಪ್ರಾಚೀನ ಕಾಲದಿಂದಲೂ ಸ್ವಚ್ಛತೆಯು ದೇಶದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ಪ್ರಮುಖ ಅಂಶವಾಗಿದೆ ಎಂದು ಹೇಳಿದ ಅವರು, ೨೦೨೫ ರಲ್ಲಿ ದೇಶವು ಸ್ವಚ್ಛತೆ ಮತ್ತು ನಂಬಿಕೆಯ ಅದ್ಭುತ ಸಂಗಮಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಧ್ವನಿ- ರಾಷ್ಟ್ರಪತಿ

ಈ ಸಂದರ್ಭದಲ್ಲಿ, ವಿವಿಧ ವಿಭಾಗಗಳಲ್ಲಿ ಒಟ್ಟು ೭೮ ಪ್ರಶಸ್ತಿಗಳನ್ನು ನೀಡಲಾಯಿತು. ಈ ವರ್ಷ, ಸೂಪರ್ ಸ್ವಚ್ಛ ಲೀಗ್ ನಗರಗಳು ಮತ್ತು ಐದು ವಿಭಿನ್ನ ಜನಸಂಖ್ಯಾ ವಿಭಾಗಗಳಲ್ಲಿ ಅಗ್ರ ಮೂರು ಸ್ವಚ್ಛ ನಗರಗಳು ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು.

<><*<><>*><>

ಯೆಮೆನ್‌ನಲ್ಲಿರುವ ನಿಮಿಷ ಪ್ರಿಯಾ ಪ್ರಕರಣವು ಸೂಕ್ಷ್ಮ ವಿಷಯವಾಗಿದ್ದು, ಈ ಪ್ರಕರಣದಲ್ಲಿ ಭಾರತ ಸರ್ಕಾರವು ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದೆ ಎಂದು ವಿದೇಶಾಂಗ ಸಚಿವಾಲಯ ಇಂದು ತಿಳಿಸಿದೆ.

ಇಂದು ಮಧ್ಯಾಹ್ನ ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಭಾರತವು ಕಾನೂನು ನೆರವು ನೀಡಿದೆ ಮತ್ತು ಕುಟುಂಬಕ್ಕೆ ಸಹಾಯ ಮಾಡಲು ವಕೀಲರನ್ನು ನೇಮಿಸಿದ್ದು, ಸರ್ಕಾರವು ನಿಯಮಿತ ಕಾನ್ಸುಲರ್ ಭೇಟಿಗಳನ್ನು ಸಹ ಏರ್ಪಡಿಸಿದೆ ಮತ್ತು ಸಮಸ್ಯೆಯನ್ನು ಪರಿಹರಿಸಲು ಸ್ಥಳೀಯ ಅಧಿಕಾರಿಗಳು ಮತ್ತು ಕುಟುಂಬ ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಅವರು ಹೇಳಿದರು.

ನಿಮಿಷ ಪ್ರಿಯಾ ಅವರ ಕುಟುಂಬವು ಪ್ರತಿವಾದಿಗಳೊಂದಿಗೆ ಪರಸ್ಪರ ಒಪ್ಪುವ ಪರಿಹಾರವನ್ನು ಕಂಡುಕೊಳ್ಳಲು ಹೆಚ್ಚಿನ ಸಮಯವನ್ನು ಕೋರುವ ಸಂಘಟಿತ ಪ್ರಯತ್ನಗಳನ್ನು ನಡೆಸಲಾಗಿದೆ. ಯೆಮೆನ್‌ನಲ್ಲಿರುವ ಸ್ಥಳೀಯ ಅಧಿಕಾರಿಗಳು ಇದೇ ೧೬ ರಂದು ನಿಗದಿಯಾಗಿದ್ದ ಶಿಕ್ಷೆಯ ಜಾರಿಯನ್ನು ಮುಂದೂಡಿದ್ದಾರೆ ಎಂದು ವಕ್ತಾರರು ತಿಳಿಸಿದ್ದಾರೆ. ಸರ್ಕಾರ ಈ ವಿಷಯದ ಕುರಿತು ನಿಗಾವಹಿಸಿದ್ದು, ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದೆ ಎಂದು ಅವರು ಹೇಳಿದರು.

<><*<><>*><>

ಕಳೆದ ೧೦೦ ವರ್ಷಗಳಲ್ಲಿ ಸಹಕಾರಿ ಸಂಸ್ಥೆಗಳು ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿವೆ. ಮುಂದಿನ ೧೦೦ ವರ್ಷಗಳು ಸಹಕಾರಿ ಸಂಸ್ಥೆಗಳದ್ದಾಗಿವೆ ಶೇಕಡ ೯೮ ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಸಂಸ್ಥೆಗಳು ಸಕ್ರಿಯ ಪಾತ್ರ ವಹಿಸುತ್ತವೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದರು.

ಧ್ವನಿ - ಅಮಿತ್ ಶಾ

ಅವರು ಇಂದು ರಾಜಸ್ಥಾನದ ಜೈಪುರ ಬಳಿ ನಡೆಯುತ್ತಿರುವ ಸಹಕಾರಿ ಹಾಗೂ ರೋಜ್‌ಗರ್ ಉತ್ಸವದಲ್ಲಿ ಭಾಗವಹಿಸಿದರು ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರು ಪೊಲೀಸ್ ಠಾಣೆಗಳು, ಸಶಸ್ತ್ರ ಪಡೆಗಳು, ಪಡೆಗಳನ್ನು ಸಾಗಿಸುವ ವಾಹನಗಳು ಮತ್ತು ತರಬೇತಿ ಉದ್ದೇಶಗಳಿಗಾಗಿ ಬಳಸಲಾಗುವ ೧೦೦೦ ಹೊಸ ಪೊಲೀಸ್ ವಾಹನಗಳಿಗೆ ಹಸಿರು ನಿಶಾನೆ ತೋರಿದರು.

ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಪ್ರಮಾಣಪತ್ರಗಳು ಮತ್ತು ಚೆಕ್‌ಗಳನ್ನು ವಿತರಿಸಿದ ಅವರು ಸಹಕಾರದ ವಿವಿಧ ಮೂಲಸೌಕರ್ಯ ಯೋಜನೆಗಳು, ಶ್ರೀಅನ್ನ ವನ್ನು ಜನಪ್ರಿಯಗೊಳಿಸಲು ವಿಶ್ವದ ಅತಿದೊಡ್ಡ ಧಾನ್ಯ ಸಂಗ್ರಹಣಾ ಯೋಜನೆಯಡಿ ನಿರ್ಮಿಸಲಾದ ೨೪ ಗೋದಾಮುಗಳು ಮತ್ತು ೬೪ ರಾಗಿ ಮಳಿಗೆಗಳನ್ನು ಸಚಿವರು ಉದ್ಘಾಟಿಸಿದರು. ಗೋಪಾಲ್ ಕ್ರೆಡಿಟ್ ಕಾರ್ಡ್ ಯೋಜನೆಯಡಿಯಲ್ಲಿ ಸುಮಾರು ೧೨ ಕೋಟಿ ರೂಪಾಯಿಗಳ ಸಾಲ ವಿತರಿಸುವುದರ ಜೊತೆಗೆ, ಅವರು ಶ್ವೇತ ಕ್ರಾಂತಿ ೨.೦ ಆನ್‌ಲೈನ್ ನೋಂದಣಿ ವೇದಿಕೆಯನ್ನು ಸಹ ಪ್ರಾರಂಭಿಸಿದರು.

<><*<><>*><>

ಈ ವರ್ಷದ ಅಂತ್ಯದ ವೇಳೆಗೆ ದೇಶದ ಲಾಜಿಸ್ಟಿಕ್ಸ್ ವೆಚ್ಚವು ಶೇಕಡಾ ಒಂಬತ್ತುಕ್ಕೆ ಇಳಿಯಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನವದೆಹಲಿಯಲ್ಲಿ ಇಂದು ಖಾಸಗಿ ಸುದ್ದಿ ವಾಹಿನಿಯ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಗಡ್ಕರಿ, ಲಾಜಿಸ್ಟಿಕ್ಸ್ ವೆಚ್ಚದಲ್ಲಿನ ಕಡಿತವು ಭಾರತದ ರಫ್ತುಗಳನ್ನು ೧.೫ ಪಟ್ಟು ಹೆಚ್ಚಿಸುತ್ತದೆ ಎಂದು ಹೇಳಿದರು. ಹೆಚ್ಚಿದ ರಫ್ತುಗಳು ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ ಮತ್ತು ಆತ್ಮನಿರ್ಭರ ಭಾರತಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಅವರು ವಿವರಿಸಿದರು. ಭಾರತವನ್ನು ಗಾಳಿ, ಶಬ್ದ, ನೀರು ಮತ್ತು ಪಳೆಯುಳಿಕೆ ಇಂಧನ ಮಾಲಿನ್ಯದಿಂದ ಮುಕ್ತಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಸಚಿವರು ತಿಳಿಸಿದರು.

<><*<><>*><>

ಕ್ರೀಡೆಯನ್ನು ಸಾರ್ವಜನಿಕ ಆಂದೋಲನವನ್ನಾಗಿ ಮಾಡುವ ಅಗತ್ಯವಿದೆ. ಸಾರ್ವಜನಿಕರು, ಕ್ರೀಡಾ ಒಕ್ಕೂಟಗಳು, ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಸೇರಿದಂತೆ ಎಲ್ಲಾ ಪಾಲುದಾರರ ಸಾಮೂಹಿಕ ಪ್ರಯತ್ನಗಳ ಮೂಲಕ ಭಾರತವು ಅದನ್ನು ಸಾಧಿಸಬಹುದು ಎಂದು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯ ಅವರು ಹೇಳಿದರು.

ಅವರು ಇಂದು ನವದೆಹಲಿಯಲ್ಲಿ ಖೇಲೋ ಭಾರತ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

<><*<><>*><>

ಜಮ್ಮು ಪ್ರದೇಶದಲ್ಲಿ ಸಂಪರ್ಕವನ್ನು ಹೆಚ್ಚಿಸಲು ಮತ್ತು ತೀರ್ಥಯಾತ್ರೆಗೆ ಅನುಕೂಲವಾಗುವಂತೆ ಮಹತ್ವದ ಕ್ರಮವಾಗಿ, ರೈಲ್ವೆ ಸಚಿವಾಲಯವು ಜಮ್ಮು ಮತ್ತು ಶ್ರೀ ಮಾತಾ ವೈಷ್ಣೋದೇವಿ ಕತ್ರಾ

ನಡುವಿನ ೬೮ ಕಿಲೋಮೀಟರ್ ಉದ್ದದ ಹೆಚ್ಚುವರಿ ಹೊಸ ರೈಲು ಮಾರ್ಗಕ್ಕಾಗಿ ಅಂತಿಮ ಸ್ಥಳ ಸಮೀಕ್ಷೆಯನ್ನು ಅನುಮೋದಿಸಿದೆ.

ಉತ್ತರ ರೈಲ್ವೆಯು ೧೨ ಕೋಟಿ ೫೯ ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಈ ಸಮೀಕ್ಷೆಯನ್ನು ಕೈಗೊಳ್ಳಲಿದೆ. ಈ ಉಪಕ್ರಮದಿಂದಾಗಿ ವೈಷ್ಣೋದೇವಿಯ ಪ್ರಮುಖ ಯಾತ್ರಾ ಸ್ಥಳಕ್ಕೆ ರೈಲು ಸಂಪರ್ಕವನ್ನು ಹೆಚ್ಚಿಸುವ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಸಾರಿಗೆ ಮೂಲಸೌಕರ್ಯವನ್ನು ಸುಧಾರಿಸುವ ನಿರೀಕ್ಷೆಯಿದೆ.

<><*<><>*><>

ಈ ವಾರದ ಆರಂಭದಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಹಿಂದಿರುಗಿದ ಶುಭಾಂಶು ಶುಕ್ಲಾ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ತಿಳಿಸಿದೆ.

<><*<><>*><>

ಲಾಸ್ ವೇಗಾಸ್‌ನಲ್ಲಿ ನಡೆದ ಫ್ರೀಸ್ಟೈಲ್ ಗ್ರ್ಯಾಂಡ್ ಸ್ಲ್ಯಾಮ್ ಚೆಸ್ ಪಂದ್ಯಾವಳಿಯಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ್ ವಿಶ್ವದ ನಂಬರ್ ಒನ್ ಆಟಗಾರ ಮ್ಯಾಗ್ನಸ್ ಕಾರ್ಲ್‌ಸೆನ್ ಸೋಲಿಸುವ ಮೂಲಕ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಕೇವಲ ೩೯ ನಡೆಗಳಲ್ಲಿ ಪ್ರಜ್ಞಾನಂದ್ ಮುನ್ನಡೆ ಪಡೆದಿದ್ದಾರೆ. ಕಾರ್ಲ್‌ಸನ್ ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ.

ಈ ಗೆಲುವಿನೊಂದಿಗೆ ಪ್ರಜ್ಞಾನಂದ್ ಎಲ್ಲಾ ಮಾದರಿಗಳಲ್ಲಿ ಕಾರ್ಲ್‌ಸನ್ ವಿರುದ್ಧ ಗೆಲುವು ಸಾಧಿಸಿದ ಸಾಧನೆ ಮಾಡಿದ್ದಾರೆ.

<><*<><>*><>

ಬೌದ್ಧಿಕ ವಿಶೇಷಚೇತನೆ ವಿಷ್ಯಾದ ಅಗ್ರ ಶ್ರೇಯಾಂಕದ ಪ್ಯಾರಾ ಲಾನ್ ಟೆನಿಸ್ ಆಟಗಾರ್ತಿ ಲಕ್ಷ್ಮಿ ಜಡಾಲ, ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ನಡೆದ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಶಿಪ್ ೨೦೨೫ ರಲ್ಲಿ ಚಿನ್ನದ ಪದಕ ಗೆದ್ದರು. ಈ ಗೆಲುವಿನೊಂದಿಗೆ, ೧೫ ವರ್ಷದ ಜಡಾಲ ಈಜಿಪ್ಟ್‌ನ ಕೈರೋದಲ್ಲಿ ನಡೆಯಲಿರುವ ವಿಶೇಷ ಒಲಿಂಪಿಕ್ಸ್ ವಿಶ್ವ ಕ್ರೀಡಾಕೂಟ ೨೦೨೬ ಕ್ಕೆ ಅಧಿಕೃತವಾಗಿ ಅರ್ಹತೆ ಪಡೆದಿದ್ದಾರೆ.

೧೬ ವರ್ಷದೊಳಗಿನವರ ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಜಡಾಲ ತನ್ನ ಮೂರು ಪಂದ್ಯಗಳನ್ನು ನೇರ ಸೆಟ್‌ಗಳಲ್ಲಿ ಗೆದ್ದು ಅಜೇಯರಾಗಿದ್ದರು. ಸುದ್ದಿಗಾರರೊಂದಿಗೆ ಮಾತನಾಡಿದ ಜಡಾಲ, ಈ ಪಂದ್ಯಾವಳಿಯನ್ನು ಗೆದ್ದು ವಿಶೇಷ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವುದು ಕನಸು ನನಸಾಗಿದೆ ಎಂದು ಹೇಳಿದರು.

<><*<><>*><>